ಓ.ಎಸ್-80/2023 ಡಿ.ಡಬ್ಲ್ಯೂ-3 (ಚಿಕ್ಕಣ್ಣ)

ದಿನಾಂಕಃ **17.12.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರತಿವಾದಿ ಪರ ಶ್ರೀ.ಎನ್.ಕೆ.ಎಸ್.ವಕೀಲರಿಂದ :**

(ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ, ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.)

**ಪಾಟೀ ಸವಾಲು : ವಾದಿ ಪರ ಶ್ರೀ ಎಸ್.ಕೆ.ವಕೀಲರಿಂದ :**

ವಾದಿ ಮತ್ತು ಪ್ರತಿವಾದಿ ನಮ್ಮ ಊರಿನವರಿರುತ್ತಾರೆ. ಪ್ರತಿವಾದಿಯು ಮೊದಲು ಯರಗನಹಳ್ಳಿಯಲ್ಲಿ ವಾಸವಿದ್ದರು. ಯರಗನಹಳ್ಳಿಯಿಂದ ಬೊಂತಗಳ್ಳಿ ಗ್ರಾಮಕ್ಕೆ ಬಂದು ವಾಸವಾಗಿರಲು ಪ್ರಾರಂಭಿಸಿ ಸುಮಾರು 20 ವರ್ಷಗಳಾಗಿವೆ. ಮೊದಲು ರವಿಕುಮಾರ್ ಸಣ್ಣಯ್ಯರವರ ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು ಸದರಿ ಪ್ರತಿವಾದಿಯು ನಮ್ಮ ಊರಿನ ಸಣ್ಣಯ್ಯರವರ ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿಯ ತಂದೆಗೂ ಸಹ ನಮ್ಮ ಊರಿನಲ್ಲಿ ಜಮೀನು ಇತ್ತು. ಹಾಗೆಯೇ ಅವರಿಗೆ ಮನೆ ಇತ್ತು ಎಂದರೆ ಸುಳ್ಳು. ಅದೇ ರೀತಿ ಅವರಿಗೆ ನಿವೇಶನವಿತ್ತು ಎಂದರೆ ಸುಳ್ಳು. ಪ್ರತಿವಾದಿಗೆ ದಾವಾ ಆಸ್ತಿಯಲ್ಲಿರುವ ಮನೆಯನ್ನು ಹೊರತುಪಡಿಸಿ ಇನ್ನೊಂದು ಮನೆ ಇದೆ ಎಂದರೆ ಸುಳ್ಳು. ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಸರ್ವೆ ಮಾಡಲು ವಾದಿ ಮತ್ತು ಪ್ರತಿವಾದಿ ಅರ್ಜಿ ಹಾಕಿದ್ದರು, ಅದನ್ನು ನಾನು ತಿಳಿದುಕೊಂಡಿದ್ದೇನೆ. ಸರ್ವೆ ಮಾಡುವಾಗ ಆ ಸ್ಥಳಕ್ಕೆ ನಾನು ಹೋಗಿದ್ದೆ. ನಾನು ಮಹಜರಿಗೆ ರುಜು ಹಾಕಿಲ್ಲ. ನಾನು ಹೇಳಿದಂತೆ ಯಾವುದೇ ಸರ್ವೆ ನಡೆದಿಲ್ಲ, ಆದರೂ ಸಹ ಸರ್ವೆ

ನಡೆದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಆಗಿರುವ ಕ್ರಯಪತ್ರವನ್ನು ನಾನು ನೋಡಿಲ್ಲ. ಕ್ರಯಪತ್ರದಲ್ಲಿ ಏನು ಒಕ್ಕಣೆ ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಹಾಗಾಗಿ ವಾದಿ ಮತ್ತು ಪ್ರತಿವಾದಿಗೆ ಆಸ್ತಿಯು ಭಾಗ ಆಗಬೇಕೆಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿಗೆ ಆದ ಕ್ರಯಪತ್ರದ ವ್ಯವಹಾರಕ್ಕೆ ನಾನು ಮಧ್ಯಸ್ಥಿಕೆ ವಹಿಸಿರುವುದಿಲ್ಲ. ನಾನು ಮತ್ತು ಪ್ರತಿವಾದಿ ತುಂಬಾ ಪರಿಚಿತರು ಎಂದರೆ ಸುಳ್ಳು. ಚಿಕ್ಕತಾಯಮ್ಮರವರ ಮನೆಯಲ್ಲಿ ರವಿಕುಮಾರ್ ವಾಸವಾಗಿರುವುದರಿಂದ ನನಗೆ ಅನುಕೂಲವಾಗುತ್ತದೆ ಎನ್ನುವ ಕಾರಣಕ್ಕಾಗಿ ಪ್ರತಿವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅನುಕೂಲವಾಗುತ್ತದೆ ಎಂದು ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**